

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ವಲಸೆ ಬಂದ ಭಾರತದ ದೇವರುಗಳು!....

ಮಠ ಮತ್ತು ಸಮಾಜದ ನೂರಾರು ಲೌಕಿಕ ವ್ಯವಹಾರಗಳಿಂದ ದಣಿದು ಶಿಷ್ಯರಿಂದ ಬೀಳ್ಕೊಂಡು ಮಧ್ಯರಾತ್ರಿ ಬೆಂಗಳೂರಿನಲ್ಲಿ ಏರ್‌ಫ್ರಾನ್ಸ್ ವಿಮಾನವನ್ನೇರಿ ಕುಳಿತಾಗ ಎಡಬಲದಲ್ಲಿ ಪರಿಚಿತರಾರೂ ಇಲ್ಲದ ಕಾರಣ ನಮ್ಮ ಪಾಡಿಗೆ ನಾವು ಇರುವಂತಾಗಿ ಮನಸ್ಸು ಹಗುರವಾಯಿತು. ಗಗನಸಖಿ ಓದಲು ಪತ್ರಿಕೆಗಳನ್ನು ತಂದಾಗ ಮೂರು ವಾರಗಳ ಹಿಂದೆಯಷ್ಟೇ ಓದಿದ ದಾರುಣ ವರದಿ ನೆನಪಾಯಿತು. ಬೆಂಗಳೂರಿಗೆ ಬಂದು ಹೋಗಿದ್ದ ಬೇರೊಂದು ಏರ್‌ಫ್ರಾನ್ಸ್ ವಿಮಾನ ಬ್ರೆಜಿಲ್ಲಿನ ರಯೋಡಿ ಜನೈರೋ ವಿಮಾನ ನಿಲ್ದಾಣದಿಂದ ಗಗನಕ್ಕೆ ಹಾರಿದ ಕೆಲವೇ ಕ್ಷಣಗಳಲ್ಲಿ ಸಮುದ್ರಕ್ಕೆ ಬಿದ್ದು ನೂರಾರು ಪ್ರಯಾಣಿಕರು ದುರಂತಕ್ಕೆ ಒಳಗಾದ ಭೀಕರ ದೃಶ್ಯ ಕಣ್ಮುಂದೆ ಸುಳಿಯಿತು. ಎರಡು ವರ್ಷಗಳ ಹಿಂದೆ ಪ್ಯಾರಿಸ್‌ನಿಂದ ಬೆಂಗಳೂರಿಗೆ ಹೊರಡುವಾಗ ರನ್‌ವೇನಿಂದ ಇನ್ನೇನು ಮೇಲಕ್ಕೆ ಹಾರಬೇಕೆನ್ನುವ ಕೊನೆಯ ಗಳಿಗೆಯಲ್ಲಿ ತಾಂತ್ರಿಕ ದೋಷ ಮನಗಂಡ ಪೈಲೆಟ್ ದಿಢೀರನೆ ಬ್ರೇಕ್ ಹಾಕಿ ನಿಲ್ಲಿಸಿದಾಗ ಮಳೆಗಾಲದಲ್ಲಿ ಘನಘೋರ ಸಿಡಿಲಿನಂತೆ ಆರ್ಭಟಿಸಿದ್ದ ವಿಮಾನ ಅದೇ ಇರಬಹುದೇ ಎಂಬ ಸಣ್ಣ ಅನುಮಾನವೂ ಮೂಡಿತು. ರೈಲುಬಸ್ಸುಗಳ ಪ್ರಯಾಣಕ್ಕಿಂತ ವಿಮಾನ ಪ್ರಯಾಣವೇ ಬಹಳ ಸುರಕ್ಷಿತ ಎಂದು ಹೇಳುತ್ತಾರೆ. ವಾಯುಮಾರ್ಗದಲ್ಲಿ ಯಾವ ಅಡೆತಡೆಗಳೂ ಇರುವುದಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವಾಗ ಎದುರಿಗೆ ಬರುವ ಒಂದೊಂದು ವಾಹನವೂ ಒಬ್ಬೊಬ್ಬ ಯಮದೂತನಿದ್ದಂತೆ! ಬಂದೂಕಿನ ಗುಂಡಿನ ವೇಗದಲ್ಲಿ ಬರುತ್ತಿರುತ್ತವೆ. ನೀವು ಎಷ್ಟೇ ಹುಷಾರಾಗಿದ್ದು ರಸ್ತೆಯ ಎಡಬದಿಯಲ್ಲಿ ಹೋದರೂ ಎದುರುಗಡೆಯಿಂದ ಬರುವ ವಾಹನದ ಚಾಲಕ 'ಗುಂಡು' ಹಾಕಿದ್ದರೆ ನೀವಾದರೂ ಏನು ಮಾಡಲು ಸಾಧ್ಯ? ಓಡಾಡದೆ ಮನೆಯಲ್ಲಿಯೇ ಕುಳಿತುಕೊಳ್ಳಲು ಬರುತ್ತದೆಯೇ? ಮನೆಯಲ್ಲಿದ್ದರೂ ನೀವು ಬಚ್ಚಲಮನೆಗೆ ಹೋದಾಗ ಜಾರಿ ಬಿದ್ದು ತಲೆ ಒಡೆದುಕೊಳ್ಳುವುದಿಲ್ಲವೆಂದು ಏನು ಖಾತ್ರಿ? ಹೆಲ್‌ಮೆಟ್ ಹಾಕಿಕೊಂಡು ಬಾತ್‌ರೂಂಗೆ ಹೋಗುವುದಾಗಿ ಹೇಳಿದರೆ ಯಾರಾದರೂ ನಗುವುದಿಲ್ಲವೇ? ಆಗಲೂ ಜಾರಿ ಬಿದ್ದು ಕಾಲು ಮುರಿಯುವುದಿಲ್ಲವೆಂದು ಏನು ಖಾತ್ರಿ? ಇಂತಹ ಸಂದರ್ಭಗಳಲ್ಲಿ ಏನು ಆಗಬೇಕೆಂದಿದೆಯೋ ಅದು ಆಗಿಯೇ ಆಗುತ್ತದೆ; ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವೆಂದು ಭಾರತೀಯರು ಉದ್ಗರಿಸುತ್ತಾರೆ.

"ನೀ ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ" ಎಂಬ ಬಸವಣ್ಣನವರ ವಚನ ನೆನಪಾಯಿತು. ಪ್ರಯಾಣಿಕರೆಲ್ಲರ ಜೀವ ಪೈಲೆಟ್ ಕೈಯಲ್ಲಿ, ಪೈಲೆಟ್ ಜೀವ ದೇವರ ಕೈಯಲ್ಲಿ. ವಿಮಾನ ಬಿದ್ದು ತಾಯಿ ಸತ್ತರೂ ಆಕೆಯ ಕೈಯೊಳಗಿನ ಹಸುಗೂಸು ಯಾವ ಸುರಕ್ಷತಾಕ್ರಮವಿಲ್ಲದೆಯೂ ಪವಾಡಸದೃಶವಾಗಿ ಪಾರಾದ ಉದಾಹರಣೆಗಳುಂಟು! ಮನುಷ್ಯ ಏನೇ ಪ್ರಯತ್ನ ಮಾಡಿದರೂ ಈ ಸೃಷ್ಟಿಯ ಆಚೆ ಇರುವ ಕಾಣದ ಕೈಗಳ ಕೈವಾಡವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವೆಂಬುದು ಭಾರತೀಯರ ಬಲವಾದ ನಂಬುಗೆ. "ಕೋಲತುದಿಯ ಕೋಡಗನಂತೆ, ನೇಣ ತುದಿಯ ಬೊಂಬೆಯಂತೆ, ಆಡುವೆನಯ್ಯಾ ಆಡುವೆನು ನೀನಾಡಿಸಿದಂತೆ ಆಡುವೆನು" ಎಂಬ ಅಕ್ಕಮಹಾದೇವಿಯ ವಚನವನ್ನು ನೆನಪಿಸಿಕೊಳ್ಳುತ್ತಾ ಹಿಂದಕ್ಕೆ ಒರಗಿದಾಗ ಕೆಲವೇ ಕ್ಷಣಗಳಲ್ಲಿ ನಿದ್ರೆ ಆವರಿಸಿತು. ಹವಾನಿಯಂತ್ರಿತ ವಿಮಾನದ ಸುಖಾಸನ ಗಾಢನಿದ್ರೆಗೆ ಅಗ್ರಾಸನವಾಗಿತ್ತು. ನಮ್ಮಂತೆ ನೂರಾರು ಪ್ರಯಾಣಿಕರನ್ನು ಮತ್ತು ಅವರ ಸಾಮಾನುಸರಂಜಾಮುಗಳನ್ನು ತನ್ನ ಉದರದೊಳಗೆ ಸುರಕ್ಷಿತವಾಗಿಟ್ಟುಕೊಂಡು ಕಾರ್ಗತ್ತಲಲ್ಲಿ ಭೋರ್ಗರೆಯುತ್ತಾ ನಭೋಮಂಡಲವನ್ನು ಭೇದಿಸಿ ಬೆಂಗಳೂರಿನಿಂದ ಒಂದೇ ನೆಗೆತಕ್ಕೆ 8 ಸಾವಿರ ಕಿ.ಮೀ ದೂರದಲ್ಲಿರುವ ಪ್ಯಾರಿಸ್ಸಿನ ಚಾರ್ಲ್ಸ್ ಡಿಗಾಲೆ ವಿಮಾನನಿಲ್ದಾಣವನ್ನು ತಲುಪಿಸಿದಾಗ ಬೆಳಗಿನ 8 ಘಂ. ಆಗಿತ್ತು. ನಿಗದಿತ ವೇಳೆಗಿಂತ ಅರ್ಧಗಂಟೆ ಮುಂಚೆ ತಲುಪಿದ ವಿಮಾನ ಎಲ್ಲರ ಗಡಿಯಾರವನ್ನು ಕಾಲಮಾನದಲ್ಲಿ ಮೂರುವರೆ ಗಂಟೆ ಹಿಂದಕ್ಕೆ ಸರಿಸಿತ್ತು. 'ದಾರಿಖರ್ಚಿ'ಗೆಂದು ನಾಗತೀಹಳ್ಳಿ ಚಂದ್ರಶೇಖರ್‌ರವರು ಕೊಟ್ಟಿದ್ದ 'ನನ್ನ ಗ್ರಹಿಕೆಯ ಫ್ರಾನ್ಸ್ ಅಯನ' ಎಂಬ ಅವರ ಪುಸ್ತಕ 'ತೆರೆದ ಕಣ್ಣು'ಗಳಿಂದ ನಮ್ಮನ್ನೇ ನಿಟ್ಟಿಸುತ್ತಾ ಶಿವರಾತ್ರಿಜಾಗರಣೆಯನ್ನು ಮಾಡಿ ತಣ್ಣಗೆ ನಮ್ಮ ಕೈಯಲ್ಲಿ ಕುಳಿತಿತ್ತು! "ನಾನು ಮೋಡಗಳ ಮೇಲೆ ತೇಲಿದೆ, ಆಕಾಶ-ಭೂಮಿಗಳ ತೂಗುಯ್ಯಾಲೆಯಲ್ಲಿ ಜೀಕಿದೆ" ಎಂಬ ಅವರ ಪ್ರವಾಸಾನುಭವ ಅಕ್ಷರಶಃ ಸ್ವಾನುಭವಸತ್ಯವಾಗಿತ್ತು. ಆದರೆ "ನನಗೆ ಭೂಮಿಯ ಚಲನೆಯ ವೇಗ ತಿಳಿಯಿತು, ನಾನು ಕಡಲವಿಸ್ತಾರವನ್ನು ಬರಿಗಣ್ಣಿನಿಂದ ಅಳೆದೆ" ಎಂದು ಮುಖಾಮುಖಿಯಾಗಿ ಹೇಳುವ ಸ್ಥಿತಿಯಲ್ಲಿ ಮಾತ್ರ ನಾವಿರಲಿಲ್ಲ!

ವಿಮಾನದಿಂದ ಇಳಿಯುವಾಗ ಸಹಪ್ರಯಾಣಿಕಳಾದ ಅಪರಿಚಿತ ಭಾರತೀಯ ತಾಯಿಯೊಬ್ಬಳು ನಮ್ಮನ್ನು ನೋಡಿದಾಕ್ಷಣವೇ ಬಗ್ಗಿ ನಮಸ್ಕರಿಸಿ ತನ್ನ ಕೈಯಲ್ಲಿದ್ದ ಪುಟ್ಟ ಮಗುವಿಗೆ 'ಜಯ್ ಬೋಲೋ ಬೇಟಾ' ಎಂದಾಗ ನಮ್ಮನ್ನು ನಿದ್ರೆಯಿಂದ ಎಚ್ಚರಿಸಿದಂತಾಗಿತ್ತು! ರಾತ್ರಿಯೆಲ್ಲಾ ಪ್ರಯಾಣ ಮಾಡಿ ಬಾಡಿದ ಮುಖಮುದ್ರೆಯ ಮುಗ್ಧ ಮಗು ಪುಟ್ಟ ಹೆಜ್ಜೆಗಳನ್ನಿಡುತ್ತಾ ತಾಯಿಯ ಒತ್ತಾಸೆಗೆ ಮಣಿದು ತನ್ನ ಹೊಳಪಾದ ಕಣ್ಣುಗಳಿಂದ ನಮ್ಮತ್ತ ನೋಡಿ ಕೈಬೀಸಿತು. ಆ ತಾಯಿ ಹಿಂದಿಯಲ್ಲಿ ಮಗುವಿಗೆ ಹೇಳಿದ್ದನ್ನು ನೋಡಿದರೆ ಅವಳು ಬೆಂಗಳೂರಿನಲ್ಲಿ ನೆಲೆಸಿರುವ ಉತ್ತರಭಾರತೀಯ ಮಹಿಳೆ ಇರಬೇಕೆನಿಸಿತು. 'ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು' ಎಂಬ ಕನ್ನಡದ ನುಡಿಗಟ್ಟಿಗಿರುವ ಅರ್ಥದ ಮತ್ತೊಂದು ಮಜಲು ಗೋಚರಿಸಿತು: ತಾಯಿ ತನ್ನ ಮಗುವಿಗೆ ಪಾಠ ಕಲಿಸಲು ಮನೆಯೇ ಆಗಬೇಕೆಂದಿಲ್ಲ, ಭೂಮಿಯಂತೆ ಆಕೆಯೂ ವಿಶ್ವಂಭರೀ! ಒಂದೆಡೆ ಐರೋಪ್ಯದೇಶಗಳ ತಾಯಂದಿರು ತಮ್ಮ ಮಕ್ಕಳಿಗೆ

ನವನಾಗರೀಕತೆಯ ಶಿಷ್ಟಾಚಾರಗಳನ್ನು ಕಲಿಸಿಕೊಡುತ್ತಿರುವುದು ಕಂಡುಬಂದರೆ ಮತ್ತೊಂದೆಡೆ ಭಾರತೀಯ ತಾಯಂದಿರು ತಮ್ಮ ಮಕ್ಕಳಿಗೆ ಆಧ್ಯಾತ್ಮಶಿಕ್ಷಣ ನೀಡುತ್ತಿರುವುದು ವಿಭಿನ್ನ ಸಂಸ್ಕೃತಿಯ ನೆಲದಲ್ಲಿ ನಿಚ್ಚಳವಾಗಿ ಕಾಣಿಸಿತು.

ಪ್ಯಾರಿಸ್ ವಿಮಾನನಿಲ್ದಾಣದಲ್ಲಿಯೇ ಪ್ಯಾರಿಸ್ ಕುರಿತ ನಾಗತೀಹಳ್ಳಿಯವರ ಪುಸ್ತಕದ ಕೆಲವು ಪುಟಗಳನ್ನು ಓದುತ್ತಿದ್ದಂತೆಯೇ ಷಿಕಾಗೋಗೆ ಹೊರಟು ನಿಂತಿದ್ದ ನಮ್ಮ ಮುಂದಿನ ವಿಮಾನದ ಬೋರ್ಡಿಂಗ್ ಕರೆ ಧ್ವನಿವರ್ಧಕದಲ್ಲಿ ಕೇಳಿ ಬಂತು. ಒಂದು ವಿಮಾನದಿಂದ ಇಳಿದು ಮತ್ತೊಂದು ವಿಮಾನ ಹತ್ತುವಾಗಲೂ ಸುರಕ್ಷತಾಸಿಬ್ಬಂದಿಯವರಿಂದ ಅಡಿಯಿಂದ ಮುಡಿಯವರೆಗೆ ತಪಾಸಣೆ. ಯಾವ ದೇಶದ ರಕ್ಷಣಾಮಂತ್ರಿಗೂ ಈ ತಪಾಸಣೆಯಿಂದ ವಿನಾಯಿತಿ ಇಲ್ಲ. ಕಾಲಲ್ಲಿರುವ ಷೂಗಳು, ಸೊಂಟದಲ್ಲಿರುವ ಬೆಲ್ಟ್, ಜೇಬಿನಲ್ಲಿರುವ ಮೊಬೈಲ್ ಫೋನು, ಕೈಯಲ್ಲಿರುವ ಹ್ಯಾಂಡ್‌ಬ್ಯಾಗ್, ಕನ್ನಡಕ, ಕೈಗಡಿಯಾರ, ಪೆನ್ನು ಎಲ್ಲವನ್ನೂ ಎಕ್ಸರೇ ಯಂತ್ರದಲ್ಲಿ ತಪಾಸಣೆಮಾಡಲು ಟ್ರೇನಲ್ಲಿ ಇಡಬೇಕು. ಬರಿಗಾಲಲ್ಲಿ ಮೆಟಲ್‌ಡಿಟೆಕ್ಟರ್ ಮೂಲಕ ಹಾಯ್ದುಹೋಗುವಾಗ ಎಚ್ಚರಿಕೆಯ ಗಂಟೆ ಬಾರಿಸಿದರೆ ಮತ್ತೆ ಹಿಂದಕ್ಕೆ ಹೋಗಿ ಟ್ರೇನಲ್ಲಿ ಇಡಲು ಮರೆತಿದ್ದ ಇನ್ನಿತರೆ ಲೋಹದ ವಸ್ತುಗಳನ್ನು ಇಟ್ಟು ಮುಂದೆ ಸಾಗಬೇಕು. ಧರ್ಮಗುರುಗಳಾದರೆ ಇನ್ನೂ ಹೆಚ್ಚಿನ ತಪಾಸಣೆ. ಯಾರನ್ನೂ ನಂಬದ ಸ್ಥಿತಿ! ಸುಖಪ್ರಯಾಣಕ್ಕಾಗಿ ಎಲ್ಲರೂ ಸಹಿಸಿಕೊಳ್ಳಬೇಕಾದ ಸುಸಂಸ್ಕೃತ ಶಿಕ್ಷೆ. ಪ್ರತಿಯೊಬ್ಬರನ್ನೂ ಸಂಶಯದ ದೃಷ್ಟಿಯಿಂದ ನೋಡುವ ಈ ಉಪಕ್ರಮ ಬಂದದ್ದು ಮೂಲತಃ ಮನುಷ್ಯನ ವಂಚನಾಪ್ರವೃತ್ತಿಯಿಂದ; ನಾಗರಿಕಸಮಾಜದಲ್ಲಿ ಸಜ್ಜನರಂತೆ ತೋರಿಸಿಕೊಳ್ಳುವ ಮುಖವಾಡಧಾರಿಗಳಿಂದ.

ಪ್ಯಾರಿಸ್ಸಿನಿಂದ ಷಿಕಾಗೋಗೆ ಸುಮಾರು 9 ಗಂಟೆಗಳ ಪ್ರಯಾಣ. ವಿಮಾನದಿಂದ ಮತ್ತೊಂದು ಉದ್ದನೆಯ ಎತ್ತರದ ಜಿಗಿತ! ಹಗಲುಹೊತ್ತಾಗಿದ್ದರಿಂದ ವಾಯುಯಾನದುದ್ದಕ್ಕೂ ನಮ್ಮ ಲ್ಯಾಪ್‌ಟಾಪ್‌ನಲ್ಲಿ ಪಾಣಿನಿಯ ವ್ಯಾಕರಣ ಸೂತ್ರಗಳನ್ನು ಆಧರಿಸಿ ಸಿದ್ಧಪಡಿಸಿದ 'ಗಣಕಾಷ್ಟಾಧ್ಯಾಯೀ' ತಂತ್ರಾಂಶದ ಪರಿಷ್ಕೃತ ಆವೃತ್ತಿಯ ಪರಿಶೀಲನೆ. ಮೂರು ಗಂಟೆಯೊಳಗೆ ಬ್ಯಾಟರಿ ಮುಗಿದ ಸೂಚನೆ ಕಾಣಿಸಿದೊಡನೆಯೇ ಮುಂದೇನುಮಾಡಬೇಕೆನ್ನುವಷ್ಟರಲ್ಲಿ ಕುಳಿತ ಆಸನದಲ್ಲಿಯೇ ಅದಕ್ಕೆ ಬೇಕಾದ ವಿದ್ಯುಚ್ಛಕ್ತಿ ಪೂರೈಕೆಯ ಸೌಲಭ್ಯ ದೊರೆತು ಖುಷಿಯಾಯಿತು. ಯಾವ ಅಡೆತಡೆಗಳೂ ಇಲ್ಲದೆ ಅಷ್ಟೊಂದು ದೀರ್ಘಕಾಲ ಓದಲು ಬರೆಯಲು ಭೂಮಿಯ ಮೇಲೆ ನಮಗೆ ಸಮಯ ಸಿಗುವುದಿಲ್ಲವಲ್ಲ ಎಂಬ ನಿಟ್ಟುಸಿರು. 'ಕಾಲೋಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ' ಎಂಬ ಭವಭೂತಿಯ ಮಾತನ್ನು ನಮ್ಮ ಪಾಲಿಗೆ ಪರಿಷ್ಕರಿಸಿ 'ವಿಪುಲಂ ಚ ವ್ಯೋಮ' ಎಂದು ಹೇಳಬೇಕೆನಿಸಿತು! ಪ್ರಯಾಣದುದ್ದಕ್ಕೂ ನೀರು ಮತ್ತು ಹಣ್ಣಿನ ರಸವನ್ನು ಬಿಟ್ಟು ಬೇರೆ ಏನನ್ನೂ ಕೇಳದ ನಮ್ಮ ಮೇಲೆ ಗಗನಸಖಿಯ ಅನುಕಂಪೆ. ಹಣ್ಣಿನ ರಸದ ಜೊತೆಗೆ ಮೂರ್ನಾಲ್ಕು ಗೋಡಂಬಿ ಪ್ಯಾಕೆಟ್ಟುಗಳನ್ನು ತಂದು ಕೊಟ್ಟು ಮುಗುಳುನಗೆ ಬೀರಿದಳು. ಮಕ್ಕಳು ಏನೂ ತಿನ್ನದಿದ್ದರೆ ಏನನ್ನಾದರೂ ತಿನ್ನಿಸಬೇಕೆಂಬ ತಾಯ್ತನದ ಸೊಬಗು ಅವಳ ಹೃದಯದಲ್ಲಿತ್ತು!

ಷಿಕಾಗೋದಲ್ಲಿ 'ಓ ಹರೇ' ವಿಮಾನ ನಿಲ್ದಾಣದಲ್ಲಿ ಇಳಿದಾಗ ಸ್ವಾಗತಿಸಲು ಶಿಷ್ಯರಾದ ಡಾ. ಶಿವಕುಮಾರ್ ಸಕುಟುಂಬ ಪರಿವಾರ ಬಂದಿದ್ದರು. ಮನೆಗೆ ನಮ್ಮನ್ನು ಕರೆದೊಯ್ಯುವಾಗ ಮೊದಲಿನಂತೆ ಮಕ್ಕಳು ಕಾರಿನ ಹಿಂಬದಿಯಲ್ಲಿ ಕುಳಿತು ಹರಟೆ ಹೊಡೆಯುತ್ತಾರೆಯೇ ಎಂದು ಬೆಂಗಳೂರಿನಿಂದ ಹೊರಡುವಾಗ ಈ-ಮೇಲ್‌ನಲ್ಲಿ ಕಳುಹಿಸಿದ್ದ ನಮ್ಮ ಪ್ರಶ್ನೆಗೆ ಉತ್ತರ ದೊರಕಿತು. ಮನೆತನದ ಜವಾಬ್ದಾರಿಯನ್ನು ಹೊರುವ ವಯಸ್ಸಿನವರಾಗಿ ಬೆಳೆದಿದ್ದ ಮಕ್ಕಳು ಮುಂದಿನ ಸೀಟಿನಲ್ಲಿ ಕುಳಿತು ಕಾರಿನ ಸ್ಟೇರಿಂಗ್ ಹಿಡಿದಿದ್ದರು. ತಂದೆತಾಯಿಗಳು ಹಿಂದಿನ ಸೀಟಿನಲ್ಲಿದ್ದರು! ಮನೆಗೆ ಬಂದು ತಲುಪಿದಾಗ ಬಾಗಿಲು ತೆರೆದವರು ಈ-ಟೀವಿಯ 'ದೇಗುಲದರ್ಶನ'ದ ಗಣೇಶ್ ಮತ್ತು ನಮಿತಾ ದೇಸಾಯಿ ಕಲಾವಿದ ದಂಪತಿಗಳು. ಉಭಯಕುಶಲೋಪರಿಯ ನಂತರ ಸ್ನಾನಪೂಜಾದಿಕಾರ್ಯಗಳನ್ನು ಮುಗಿಸಿ ಭೋಜನಕ್ಕೆ ಕುಳಿತಾಗ ಒಂದು ತಿಂಗಳ ಹಿಂದೆ ರಾಷ್ಟ್ರೀಯ ಇಂಗ್ಲೀಷ್ 'ಕಾಗುಣಿತದ' ಜೇನುರಾಣಿಯಾಗಿ (Scripps National Spelling Bee) ಪ್ರಖ್ಯಾತಿಯನ್ನು ಪಡೆದ ಅನಿವಾಸಿ ಭಾರತೀಯಳಾದ 13 ವರ್ಷದ ಬಾಲಕಿ ಕಾವ್ಯಾಶಿವಶಂಕರ್ ಕೆಲಹೊತ್ತು ಸಂಭಾಷಣೆಯ ಕೇಂದ್ರಬಿಂದುವಾದಳು. ಅದರಲ್ಲೂ ಅವಳು ಮೈಸೂರಿನವಳೆಂದು ತಿಳಿದು ಮತ್ತಷ್ಟೂ ಹೆಮ್ಮೆ ಎನಿಸಿತು. ನಲವತ್ತು ಸಾವಿರ ಡಾಲರ್ ಅಂದರೆ ಸುಮಾರು ಇಪ್ಪತ್ತು ಲಕ್ಷ ರೂ. ಗಳ ನಗದು ಬಹುಮಾನವನ್ನು ಆಕೆ ಆ ಚಿಕ್ಕವಯಸ್ಸಿನಲ್ಲಿ ಗೆದ್ದಿದ್ದಳು. ಅಷ್ಟು ದೊಡ್ಡ ಮೊತ್ತದ ಬಹುಮಾನ ನಮ್ಮ ದೇಶದಲ್ಲಿ ಯಾವ ದೊಡ್ಡ ಸಾಹಿತಿಗಳಿಗೂ ಇಲ್ಲ. ಪ್ರೇಕ್ಷಕರು, ದೂರದರ್ಶನ ಇತ್ಯಾದಿ ಸಮೂಹಮಾಧ್ಯಮದವರ ಕ್ಯಾಮೆರಾಗಳಿಂದ ಸುತ್ತುವರಿದ ನಿನ್ನ ಮನಸ್ಸು ವಿಚಲಿತವಾಗುವುದಿಲ್ಲವೇ ಎಂದು ಮಾಧ್ಯಮದವರು ಕೇಳಿದಾಗ ಆಕೆ ಕೊಟ್ಟ ಉತ್ತರ: "ಅವುಗಳ ಬಗ್ಗೆ ನಾನು ಯೋಚಿಸುವುದಕ್ಕೇ ಹೋಗುವುದಿಲ್ಲ. ನನ್ನ ಗಮನವೆಲ್ಲವೂ ನನಗೆ ಸ್ಪೆಲ್ಲಿಂಗ್ ಹೇಳಲು ಕೇಳಿದ ಶಬ್ದಗಳ ಮೇಲಿರುತ್ತದೆ!" ಮರದ ಮೇಲೆ ಏನೇನು ಕಾಣಿಸುತ್ತಿದೆ ಎಂದು ದ್ರೋಣಾಚಾರ್ಯರು ಕೇಳಿದಾಗ ಅರ್ಜುನ ತಾನು ಗುರಿ ಇಟ್ಟ ಹಕ್ಕಿಯ ಕಣ್ಣು ಮಾತ್ರ ಕಾಣಿಸುತ್ತಿದೆ ಎಂದು ಹೇಳಿದಂತಿತ್ತು ಆಕೆಯ ಪ್ರತಿಕ್ರಿಯೆ.

ಭಾರತದಿಂದ ಅಮೇರಿಕೆಗೆ ಹಿಂದೂಗಳಷ್ಟೇ ವಲಸೆ ಬಂದಿಲ್ಲ. ಅವರ ಜೊತೆಯಲ್ಲಿ ಹಿಂದೂ ದೇವರುಗಳೂ ಸಹ ವಲಸೆ ಬಂದಿವೆ! ಶಿವ, ಪಾರ್ವತಿ, ಗಣೇಶ, ಸುಬ್ರಹ್ಮಣ್ಯ, ರಾಮ, ಕೃಷ್ಣ, ವೆಂಕಟೇಶ್ವರ, ಲಕ್ಷ್ಮಿ, ಭೂದೇವಿ ಇತ್ಯಾದಿ. ಅಮೇರಿಕಾದ ಉದ್ದಗಲಕ್ಕೂ ಅನೇಕ ದೇವಾಲಯಗಳು ಮೈದಾಳಿವೆ. ಆಯಾಯ ದೇವರ ಹೆಸರುಗಳಿಂದ ಈ ದೇವಾಲಯಗಳನ್ನು ಕರೆಯದೆ ಒಟ್ಟಾರೆ ಹಿಂದೂ ದೇವಾಲಯ (Hindu Temple) ಎಂದು ಕರೆಯುವುದು ಇಲ್ಲಿಯ ವಾಡಿಕೆ. ಒಂದು ಲೆಕ್ಕಾಚಾರದ ಪ್ರಕಾರ ಸುಮಾರು 300 ಕ್ಕೂ ಹೆಚ್ಚು ಹಿಂದೂ ದೇವಾಲಯಗಳು ಅಮೇರಿಕಾ ಮತ್ತು ಕೆನಡಾ ದೇಶಗಳಲ್ಲಿವೆ. ಶಿಲ್ಪಕಲಾದೃಷ್ಟಿಯಿಂದ ಈ ದೇವಾಲಯಗಳು ಭಾರತದಲ್ಲಿರುವ ದೇವಾಲಯಗಳಿಗಿಂತ ಕಡಿಮೆ ಏನಿಲ್ಲ. ಪ್ರಾಚೀನಕಾಲದಿಂದ ಭಾರತದ ದೇವಾಲಯಗಳು ಪೂಜಾಕೇಂದ್ರಗಳಷ್ಟೇ ಅಲ್ಲ ಶಿಲ್ಪಕಲಾಕೇಂದ್ರಗಳಾಗಿಯೂ ಬೆಳೆದುಬಂದಿವೆ, ಸಾಹಿತ್ಯಸಂಗೀತಕಲಾರಾಧನೆಯ ಕೇಂದ್ರಗಳಾಗಿಯೂ ರೂಪುಗೊಂಡಿವೆ. ಈ ವಿಶೇಷತೆಯನ್ನು ಅಮೇರಿಕಾದ ಹಿಂದೂ ದೇವಾಲಯಗಳಲ್ಲಿ ಕಾಣಬಹುದು. ದೇವಾಲಯಗಳಲ್ಲಿ ಹಬ್ಬಹರಿದಿನಗಳಂದು ವಿಶೇಷ ಪೂಜೆ ನಡೆಯುವುದಲ್ಲದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಭಾರತದ ಪ್ರಾಚೀನ ದೇವಾಲಯಗಳಲ್ಲಿ ಪೂಜಾರಿಗಳ ವಾಸಕ್ಕೆಂದು ಯಾವ ವ್ಯವಸ್ಥೆಯೂ ಇರುವುದಿಲ್ಲ. ಇಲ್ಲಿ ಪ್ರತಿಯೊಂದು ದೇವಾಲಯವನ್ನು ನಿರ್ಮಿಸುವಾಗಲೂ ಪೂಜಾರಿಗಳ ವಾಸಕ್ಕೆಂದೇ ದೇವಾಲಯದ ಪಕ್ಕದಲ್ಲಿ ನಿವಾಸಗಳನ್ನು

ನಿರ್ಮಿಸಿರುವುದು ಒಂದು ವಿಶೇಷ. ದೇವರ ಪೂಜೆಗೆ ಇಲ್ಲಿ ನಿತ್ಯವೂ ವ್ಯವಸ್ಥೆ ಇದ್ದರೂ, ಭಕ್ತರು ಹೆಚ್ಚಾಗಿ ಬರುವುದು ವಾರಾಂತ್ಯದಲ್ಲಿ ಮಾತ್ರ. ಬೆಳಗಿನಿಂದ ಸಂಜೆಯವರೆಗೆ 'ಕತ್ತೆ ದುಡಿದಂತೆ' ದುಡಿಯುವ ಇಲ್ಲಿಯ ಜನರಿಗೆ ಮಡದಿ ಮಕ್ಕಳನ್ನು ಮಾತನಾಡಿಸಲೂ ಪುರಸೊತ್ತು ಇರುವುದಿಲ್ಲ. ಆದಕಾರಣ "Even if God comes, He will have to wait for the weekends!" (ಸ್ವತಃ ದೇವರೇ ಬಂದರೂ ವಾರಾಂತ್ಯದವರೆಗೂ ಕಾಯಬೇಕು) ಎನ್ನುವ ವಿಡಂಬನೆಯ ಮಾತೊಂದಿದೆ. ಈ ದೇವಾಲಯಗಳ ನಿರ್ಮಾಣಕ್ಕೆ ಸ್ಥಳೀಯರ ವಿರೋಧವಿಲ್ಲದಿಲ್ಲ. ದೊಡ್ಡ ದೊಡ್ಡ ನಗರಗಳ ಸದ್ದುಗದ್ದಲಗಳಿಂದ ದೂರ ಓಡಿ ಬಂದು ಪ್ರಶಾಂತ ಸ್ಥಳದಲ್ಲಿ ಮನೆಗಳನ್ನು ಕಟ್ಟಿಕೊಂಡು ನೆಮ್ಮದಿಯಿಂದ ವಾಸವಾಗಿರುವ ತಮಗೆ ದೇವರ ಹೆಸರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಗುಡಿಗಳು ಮನಃಶಾಂತಿಯನ್ನು ಕದಡುತ್ತಿವೆಯೆಂದು ಕೋರ್ಟುಕೇಸುಗಳು ದಾಖಲಾಗಿವೆ. ದೇವಾಲಯಗಳ ಆಂತರಿಕ ಆಡಳಿತನಿರ್ವಹಣೆಯಲ್ಲಿಯೂ ಸಾಕಷ್ಟು ಬಡಿದಾಟಗಳಾಗಿ ಸ್ವತಃ ಹಿಂದೂಗಳೇ ಕೋರ್ಟಿಗೆ ಹೋಗಿರುವ ನಿದರ್ಶನಗಳೂ ಇವೆ!

ಇಲ್ಲಿಗೆ ಬಂದ ಮಾರನೆಯ ದಿನ ಈ-ಮೇಲ್ ಚೆಕ್ ಮಾಡಿದಾಗ ಕಳೆದ ವಾರ ಬರೆದಿದ್ದ 'ದೇವರಿಗೆ ನೆಗಡಿ ಆಗುತ್ತದೆಯೇ' ಲೇಖನಕ್ಕೆ ಕೆಲವಾರು ಪ್ರತಿಕ್ರಿಯೆಗಳು ಬಂದಿದ್ದವು. ಸಹೃದಯ ಓದುಗರಿಂದ ಬರುವ ಇಂತಹ ಪತ್ರಗಳೇ ಪ್ರತಿವಾರ ತಪ್ಪದೆ ನಿದ್ರೆಗೆಟ್ಟಾದರೂ ಬರೆಯಲು ನಮಗೆ ಸ್ಫೂರ್ತಿ. ಅವರಲ್ಲಿ ಬೆಂಗಳೂರಿನ ನಯನಾರಾವ್ ಎಂಬುವರು ಪುರಿಯ ಜಗನ್ನಾಥ ದೇವರಿಗೆ ಜೂನ್ ತಿಂಗಳಲ್ಲಿ ಶೀತ ಆಗುತ್ತದೆಯೆಂದೂ ಅದಕ್ಕಾಗಿ ಕಾಳುಮೆಣಸು, ಏಲಕ್ಕಿ ಹಾಕಿದ ಪಾಯಸ ನೈವೇದ್ಯಮಾಡಿ ದೇವರ ವಿಶ್ರಾಂತಿಗೆ ಬೇಗನೆ ಬಾಗಿಲು ಹಾಕುತ್ತಾರೆಂದೂ ಬರೆದಿದ್ದರು. ಇದನ್ನು ಓದಿದಾಗ ಬಹಳ ವರ್ಷಗಳ ಹಿಂದೆ ಅಮೇರಿಕೆಯ ಪ್ರಸಿದ್ಧ ನಗರ ಅಟ್ಲಾಂಟಾದಲ್ಲಿರುವ 'ಹರೇ ಕೃಷ್ಣ, ಹರೇ ರಾಮ' ಪಂಥದವರ ಶ್ರೀಕೃಷ್ಣ ದೇವಾಲಯಕ್ಕೆ ಭೇಟಿ ನೀಡಿದ ಸಂದರ್ಭ ನೆನಪಾಯಿತು. ಶಿಷ್ಯರು ನಮಗೆ ಆ ದೇವಾಲಯವನ್ನು ತೋರಿಸಲು ಕರೆದೊಯ್ದಾಗ ಸಂಜೆ ಬಹಳ ಹೊತ್ತಾಗಿತ್ತು. ಕಚ್ಚೆಪಂಚೆ ಉಟ್ಟು, ಮೈಮೇಲೆ ಅಂಗವಸ್ತ್ರ ಧರಿಸಿ, ತಲೆಯ ಮೇಲೆ ಜುಟ್ಟು ಬಿಟ್ಟುಕೊಂಡಿದ್ದ ಗೌರವರ್ಣದ ಅಮೇರಿಕನ್ ಕೃಷ್ಣಭಕ್ತ ಎದುರಾದ. ಶಿಷ್ಯರು ನಮ್ಮ ಪರಿಚಯವನ್ನು ಮಾಡಿಕೊಟ್ಟು ದೇವಾಲಯದ ಬಾಗಿಲನ್ನು ತೆರೆಯಲು ಕೇಳಿದಾಗ ಅವನು ಅತ್ಯಂತ ವಿನಯಶೀಲನಾಗಿ "Sorry, our Lord Krishna is sleeping now, we cannot wake him up!" ಎಂದು ಸೌಜನ್ಯದಿಂದ ನಿರಾಕರಿಸಿದ್ದ. ಈ ಮಾತುಗಳನ್ನು ಕೇಳಿ ನಗು ಬರಬಹುದು. ಆದರೆ ಆ ಕೃಷ್ಣಭಕ್ತ ದೇವರಿಗೆ ಮಾಡಿದ್ದ 'ಶಯನೋತ್ಸವ' ಸೇವೆ ಅತ್ಯಂತ ಶ್ರದ್ಧಾಭಕ್ತಿಯಿಂದ ಕೂಡಿತ್ತು! ಅಂತಹ ಶ್ರದ್ಧಾಭಾವನೆಗಳಿಲ್ಲದೆ ಯಾಂತ್ರಿಕವಾಗಿ ಮಾಡುವ ಧಾರ್ಮಿಕ ಆಚರಣೆಯೇ ಕಾಟಾಚಾರದ, ಬೂಟಾಟಿಕೆಯ ಭಕ್ತಿ! ಅಂಥವರನ್ನು ಕುರಿತೇ ಬಸವಣ್ಣನವರು ಹೇಳಿದ್ದು: "ನಂಬರು ನೆಚ್ಚರು ಬರಿದೆ ಕರೆವರು ನಂಬಲರಿಯರೀ ಲೋಕದ ಮನುಜರು!"

ಚಿಕಾಗೋ
8.7.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑